ಮಾಡಿಕೊಡುತ್ತೇನೆಂದು ಈ ಸಭೆಗೆ ತಿಳಿಸಿದ್ದರು. ಹಾಗೆ ಒಂದು ಹೇಳಿಕೆಯನ್ನು ಕೊಟ್ಟಮೇಲೆ ಅವರು ಅದಕ್ಕೆ ಅನುಸರಿಸಿ ನಡೆಯದಿದ್ದರೆ ಈ ಸಭೆಗೆ ಮರ್ಯಾದೆ ಬರುವುದಿಲ್ಲ. ಆದರೆ ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರೂ ಒಂದು ಹೇಳಿಕೆಯನ್ನು ಹೊರಡಿಸಿ ಶರಾವತಿ ವ್ಯಾಲಿಯಲ್ಲಿ ಅಂಥ ಪ್ರಕರಣಗಳೇನು ನಡೆದಿಲ್ಲ ಅಲ್ಲೇನೂ ಅಂಥಾ ತಪ್ಪುಗಳಾಗಿಲ್ಲ ಎನ್ನುವ ಅರ್ಥಬರುವ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈ ಶರಾವತಿ ವ್ಯಾಲೀ ಪ್ರಕರಣ ಇಡೀ ದೇಶದಲ್ಲಿರತಕ್ಕ ಎಲ್ಲ ಜನರ ಗಮನವನ್ನೂ ಸೆಳೆದಿದೆ. ಹೀಗಿದ್ದಾಗ್ಯೂ ಇವರು ಅವಸರದಲ್ಲಿ ಒಂದು ಹೇಳಿಕೆಯನ್ನು ಹೊರಡಿಸುವಂಥ ಪ್ರಮೇಯವಿರಲಿಲ್ಲ. ಇದರಿಂದ ಈ ಸಭೆಗೆ ತುಂಬಾ ಕಳವಳ ಉಂಟಾಗಿದೆ.

Mr. SPEAKER.—Is the Hon'ble Member making a speech ?

ಶ್ರೀ ಎಸ್. ಶಿವಪ್ಪ.—ಶರಾವತಿ ವ್ಯಾಲಿಯಲ್ಲಿ ಅಂಥಾ ಅನ್ಯಾಯಗಳು ನಡೆದಿದ್ದ ಭಾಗದಲ್ಲಿ ಒಂದು ಜುಡಿಷಿಯರ್ ಎನ್‌ಕ್ವೈರಿಗೆ ಅವಕಾಶ ಮಾಡಿಕೊಡುವುದಾಗಿ ಹೇಳಿದ್ದರು. ಈಚೆಗೆ ಅಂಥಾ ಅಕ್ರಮ ಅನ್ಯಾಯಗಳೇನೂ ಅಲ್ಲಿ ನಡೆದಿಲ್ಲ ಎಂದು ಒಂದು ಹೇಳಿಕೆ ಕೊಟ್ಟು ಈ ಸಭೆಗೆ ಅವರು ಈ ಹಿಂದೆ ಕೊಟ್ಟಿದ್ದ ವಾಗ್ದಾನವನ್ನು ಅಥವಾ ಭರವಸೆಯನ್ನು ಅವರು ಇಲ್ಲಿಯವರೆಗೆ ಎಷ್ಟರಮಟ್ಟಿಗೆ ಈಡೇರಿಸಿದ್ದಾರೆಂಬುದನ್ನು ಈಗ ಸಭೆಗೆ ತಿಳಿಸಲು ಸಾಧ್ಯವೇ ಎಂಬುದನ್ನು ನಾನೀಗ ಕೇಳುತ್ತಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ನಾನೂ ಕೂಡ ಸರ್ಕಾರದವರ ಗಮನವನ್ನು ಇತ್ತಕಡೆಗೆ ಸೆಳೆಯಲು ತಮಗೆ ಒಂದು ಸೂಚನೆಯನ್ನು ಕೊಟ್ಟಿದ್ದೆ. ಈ ಹಿಂದೆ ಒಂದಾವರ್ತಿ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಫೈಲುಗಳಿನ್ನೂ ನನಗೆ ಸಿಕ್ಕಿಲ್ಲ ಅವು ಸಿಕ್ಕಿದನಂತರ ವಿಚಾರವನ್ನು ಪರಿಶೀಲನೆ ಮಾಡಿ ಅಗತ್ಯವಿದ್ದರೆ ಒಂದು ನ್ಯಾಯಾಂಗ ಸಮಿತಿಯನ್ನು ನೇಮಕಮಾಡಿ ವಿಚಾರಣೆ ನಡೆಸಲು ಅವಕಾಶ ಮಾಡಿಕೊಡುವುದಾಗಿ ಒಂದು ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಯನ್ನು ಈ ದಿವಸ ಉಲ್ಲಂಘನೆ ಮಾಡುವುದು ಈ ಸಭಾಗೌರವಕ್ಕೆ ತಕ್ಕದ್ದೇ.....

Mr. SPEAKER.—I have made it perfectly clear that I am not permitting a speech raising so many points for and against. The Hon'ble Member has mentioned it.

ಶ್ರೀ ಎಸ್. ಎಂ. ಕೃಷ್ಣ.—ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳ ಖಚಿತವಾದ ನಿಲುವೇನು ಎಂಬುದನ್ನು ಈ ಸಭೆಗೆ ತಿಳಿಸುವುದಕ್ಕೆ ಅಧ್ಯಕ್ಷರು ಒಂದು ಅವಕಾಶ ಮಾಡಿಕೊಡಬೇಕೆಂದು ನಾನು.....

Mr. SPEAKER.—I am not concerned with any subject when it is not included the agenda. In the course of the debate they can say that they will take this action or that action. But, if it is a matter outside the agenda, he must pin-point it; otherwise, it becomes difficult.

†ಶ್ರೀ ಟಿ. ಎನ್. ಮಾದಪ್ಪಗೌಡ(ನಾಗಮಂಗಲ).—ಈ ವಿಧಾನಸೌಧ ಕಟ್ಟಿದ ವಿಚಾರದಲ್ಲಿಯೂ ಹೀಗೆ ಒಂದು ಪುಕಾರಿದ್ದ. ಇದರಲ್ಲಿ ಒಂದೂವರೆಕೋಟಿ ರೂಪಾಯಿಗಳು ದರೋಡೆ ಆಗಿದೆ ಎಂದು ಹೇಳುತ್ತಿದ್ದ ಸಂದರ್ಭದಲ್ಲಿ ಒಂದು ಜುಡಿಷಿಯರ್ ವಿಚಾರಣೆ ನಡೆಯಿತೆಂದು ನಾನು ಕೇಳಿದ್ದೆ. ಹಾಗೇ ಇದರ ಬಗ್ಗೆಯೂ ಒಂದು ವಿಚಾರಣಾ ಸಮಿತಿಯನ್ನು ನೇಮಕಮಾಡಲು ಅಡ್ಡಿಯೇನಿದೆ?

Chief Minister's Statement.

† Sri S. NIJALINGAPPA.—Sir, this matter has been coming up off and on and because the matter is coming up so often before us, naturally I have reason to consider and I am considering. My own impression is, a mountain is made out of a mole hill and people are putting questions merely on imagination. Because of the furore raised in this House, I thought that a judicial enquiry may be made. But, I have gone through the reports and files and there is no necessity to hold a judicial enquiry in this regard. Because unnecessary controversy has been raised and suspicion has been created in the public mind, I have decided

(SRI S. NIJALINGAPPA)

to publish a White paper on this matter and it will take some time to do it. About the threat that was held out by my friend, we are not afraid of any threat. I know politics have been made out of this question.

Sri S. M. KRISHNA.—Sir, it is not a threat.

Sri S. NIJALINGAPPA.—I took it as a threat and Government is going to meet any threat. Now the Hon'ble Member says that it was not a threat.

(Sri S. Sivappa interrupted.)

Mr. SPEAKER.—Order, order. I expect better co-operation from Sri Sivappa, I am giving fullest opportunity. He must be patient when another member is on his legs. In a debate, being patient and putting things at the appropriate time will help the matter a great deal. When the Hon'ble Chief Minister is on his legs, if he is not permitted to complete his sentence, it is not good. Let us observe some decorum.

Sri S. SIVAPPA.—Sir, we have been very democratic and very patient.

Mr. SPEAKER.—I said, that he was violating the rules.

Sri S. SIVAPPA.—Sir, we are trying to draw the attention of the Chief Minister to this matter but I never expected a threat from him. Then, where is democracy?

Sri S.M. KRISHNA.—The Chief Minister seems to be awfully touchy about this subject. There is no reason why he should be so touchy.

Mr. SPEAKER.—I am concerned about the decorum of the Houses. Whether it is the Leader of the House or the Leader of the Oppositions, all must observe the rules and decorum. I appealed to the Members again and again, particularly the Leader of the Opposition that when the Chief Minister was on his legs and was not yielding, he must have patience to listen and then get up. I am not concerned with the merits or de-merits or the controversy.

Sri S. NIJALINGAPPA.—Sir, if our friends extend a threat, let them do so and I am not worried about that. If it is a constitutional method, let them have it ; otherwise, it is left to them to take any course that they like. But the matter is agitating the public mind more on account of lapses that have happened in the construction of Sharavaty Project, than the necessity created by the facts. I know there is a lot of imagination, the way in which it is approached. There may be possibly irregularities ; they may be there. That is why we are examining it and a White Paper will be issued.

Mr. SPEAKER.—May I know the time that the Government may take for this ?

Sri S. NIJALINGAPPA.—Possibly, it may take 2 to 3 weeks, Sir. I will try to hasten it. It is a matter which has gone on for six to seven years and it requires some time. Anyway, we are hastening.

Mr SPEAKER.—I would appeal to the Government to try to make it as early as possible and then we shall take it over later.

Sri S. NIJALINGAPPA.—Yes, Sir.

NON-OFFICIAL RESOLUTION.

Re: Appointment of a Committee to investigate into malpractices, etc. in Government and Semi-Government Administrative and Corporate Bodies.

(Debate continued.)

†ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಈಗ ಸಭೆಯು ಮುಂದಿರತಕ್ಕ ವಿಚಾರ, ಅಂದ್ರೆ ಈ ನಿರ್ಣಯ ಬಹಳ ಜರೂರಾದದ್ದು. ಈ ಒಂದು ವ್ಯಾಧಿಯೇನಿವೆ ಇದು ರಾಷ್ಟ್ರೀಯವಾಗಿ ವ್ಯಾಪಿಸಿ ಕೊಂಡಿರುವಂಥ ಒಂದು ದೊಡ್ಡ ವ್ಯಾಧಿಯಾಗಿದೆ. ಆದುದರಿಂದ ನಾವು ಇದಕ್ಕೆ ಒಂದು ರಾಷ್ಟ್ರೀಯ ರೂಪವಾದ ಪರಿಹಾರೋಪಾಯವನ್ನೇ ಕಂಡುಹಿಡಿಯಬೇಕಾಗಿದೆ. ಈ ಭ್ರಷ್ಟಾಚಾರ, ಲಂಚಾವತಾರ ಎಂಬುದು ದಿನದಿನಕ್ಕೂ ಬೃಹದಾಕಾರ ತಾಳುತ್ತಿದೆ.

[MR. DEPUTY SPEAKER in the Chair.]

ಇಂತಹ ಸಮಯದಲ್ಲಿ ಸರ್ವೇ ಸಾಮಾನ್ಯವಾಗಿ ಹಿಂದುಳಿದಿರತಕ್ಕ ಈ ಸ್ಥಿತಿ ಇದ್ದರೂ ಕೂಡ ಇದರತ್ತ ಗಮನ ಕೊಡಬೇಕಾದರೆ ಮತ್ತು ಅವಶ್ಯಕವಾದ ಇದರ ಅಭಿವೃದ್ಧಿಗೆ ಒಂದು ಕಟ್ಟು ನಿಟ್ಟಾದ ಕಾರ್ಯಕ್ರಮವನ್ನು ಕೂಡ ಹಾಕಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಬಂದು ಹದಿನೈದು ವರ್ಷಗಳಾದ ಮೇಲೆ ನಾವು ಈ ಭ್ರಷ್ಟಾಚಾರ, ಲಂಚಗುಳಿತನದ ಪ್ರಮಾಣವನ್ನು ಏಕಪ್ರಕಾರವಾಗಿ ಗಮನಿಸಿದರೆ ಬಹುಶಃ ಈ ವ್ಯಾಧಿ ನೂರಕ್ಕೆ ನೂರರಷ್ಟು ಹೆಚ್ಚಿಕೊಂಡು ಬರುತ್ತಿದೆ ಎನ್ನುವುದರಲ್ಲಿ ಎರಡು ಅಭಿಪ್ರಾಯಕ್ಕೆ ನಮ್ಮ ದೇಶದಲ್ಲಿ ಅವಕಾಶ ಕಂಡುಬರುವಂತಿಲ್ಲ. ಯಾವ ಸರಕಾರದ ಮೇಲೆ ಯಾವುದೇ ಅಧಿಕಾರ ನಡೆಸತಕ್ಕ ಆಡಳಿತದ ಬಗ್ಗೆ ಮತ್ತು ಇನ್ನು ಹಲವಾರು ಸ್ವಾಟ್ಯುಟರಿ ಬಾಡೀಸ್ ಗಳ ಬಗ್ಗೆ ಮೇಲಿಂದ ಮೇಲೆ ಟೀಕೆಗಳು, ಆರೋಪಣೆಗಳು ಇವುಗಳೆಲ್ಲ ಮೇಲಿಂದ ಬರುತ್ತಲೇ ಬಂದಿದೆ. ನಿನ್ನೆ ತಾನೇ ಈ ಸಭೆಯಲ್ಲಿ ಎರಡು ಪರಸ್ಪರ ಸಹಕಾರ ಸಂಘಗಳ ಬಗ್ಗೆ ಬೇಕಾದಷ್ಟು ಹಣದ ದುರುಪಯೋಗವಾಗಿದೆಯೇ ಎನ್ನುವ ವಿಚಾರದಲ್ಲಿ ಸರಕಾರ ದುರುಪಯೋಗ ನಡೆದಿದೆ ಎಂದು ಒಪ್ಪಿಕೊಳ್ಳಲೇ ಬೇಕಾಯಿತು; ಎಂದ ಮೇಲೆ, ಸರಕಾರದ ಜವಾಬುದಾರಿ ಈ ವಿಚಾರದ ಮೇಲೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನಾವೂ ನೀವೂ ಕುಳಿತು ಆಲೋಚನೆ ಮಾಡಬೇಕಾಗಿದೆ. ಒಂದು ಕಾರಣ ಕೊಡುತ್ತೇನೆ. ಸ್ವಾತಂತ್ರ್ಯ ಬಂದಿದೆ. ಈ ಒಂದು ಸಂಘಟಿತ ಸಮಯದಲ್ಲಿ ಇಂತಹ ಅವ್ಯವಹಾರಗಳು ನಡೆಯುತ್ತಿರುವುದು ಸಾಧಾರಣವಾಗಿದೆ. ಇದನ್ನು ಪರೀಕ್ಷೆ ಮಾಡುವುದು ತರವಲ್ಲ ಎನ್ನತಕ್ಕವಾದವೂ ಕೂಡ ನಮ್ಮ ಮುಂದೆ ಬಂದಿದೆ. ಮತ್ತೊಂದು ವಾದ, ನಮ್ಮ ದೇಶದಲ್ಲಿ ಲಂಚಗುಳಿತನ ವ್ಯಾಪಕವಾಗಿರಬೇಕಾದರೆ, ಮತ್ತು ಹೆಚ್ಚಾಗಿರಬೇಕಾದರೆ ಜವಾಬ್ದಾರಿ ಸರಕಾರವನ್ನು ಸ್ಥಾಪನೆ ಮಾಡುವಾಗ ಜನತೆಯ ಮೇಲೆ ಎಷ್ಟುಮಟ್ಟಿನ ಜವಾಬುದಾರಿ ಇತ್ತೋ ಅಷ್ಟೇ ಸಮಾನಾದ ಜವಾಬುದಾರಿ ಹಾಗೂ ಪಾಲುಗಾರಿಕೆ ಇತರರೆಲ್ಲರಲ್ಲಿಯೂ ಇರಬೇಕೆಂದು ಕಾಂಗ್ರೆಸು ಪಕ್ಷದ ನಮ್ಮ ಸ್ನೇಹಿತರಾದ ಶ್ರೀಮಾನ್ ಅಪ್ಪಣ್ಣನವರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಇದು ಅಷ್ಟು ಸುಲಭವಲ್ಲ. ಅಷ್ಟು ಲಘುವಾಗಿ ಸರಕಾರ ಜನತೆಯ ಮೇಲೆ ತಲೆ ಹಾಕುವ ಯೋಚನೆ ಮಾಡಿ ತಪ್ಪಿಸಿಕೊಳ್ಳುವಂತೆ ನಾವು ಮಾಡುವುದು ತರವಲ್ಲ ಎಂದು ನಾನಾದರೂ ಅಭಿಪ್ರಾಯಪಡುತ್ತೇನೆ. ಜವಾಬುದಾರಿ ಸರಕಾರಗಳು ಬಂದ ಮೇಲೆ ಭ್ರಷ್ಟಾಚಾರದ ಕೂಸುಗಳು ಹಲವಾರು ನಮ್ಮ ದೇಶದಲ್ಲಿ ಜನಸಂಖ್ಯೆ ಬೆಳೆಯುವಂತೆ ಅಷ್ಟು ಶೀಘ್ರಗತಿಯಲ್ಲಿ ಬೆಳೆಯುತ್ತಿವೆ. ಈ ಭ್ರಷ್ಟಾಚಾರದ ಕೂಸುಗಳಿಗಾಗಿ ಕಾಂಗ್ರೆಸಿನ ಸರಕಾರ ಜನ್ಮ ತಾಳಿದಂದಿನಿಂದ ಜನ್ಮ ಕೊಡುತ್ತಾ ಬಂದಿದೆ ಎಂದು ಹೇಳಿದರೆ ಆ ಮಾತು ತಪ್ಪಾಗಲಾರದು.